ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ 22-11-2022

ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 168/2022 ಕಲಂ 394, 397 ಐಪಿಸಿ :-

ದಿನಾಂಕಃ 21/11/2022 ರಂದು 1130 ಗಂಟೆಗೆ ರಮೇಶ ತಂದೆ ನಾಗಪ್ಪಾ ವಯಃ 44 ವರ್ಷ ಸಾಃ ಕಿಟ್ಟಾ ತಾಃ ಬಸವ ಕಲ್ಯಾಣ ರವರು ನೀಡಿದ ದೂರಿನ ಸಾರಾಂಶವೆನೆAದರೆ ಅವರಿಗೆ ವಿಚಾರಿಸಿ, 08 ದಿವಸಗಳ ಹಿಂದೆ ಎದೆಯಲ್ಲಿ ಗುಪ್ತಗಾಯವಾಗಿರುತ್ತದೆ. ಹೀಗಿರುವಾಗ ದಿನಾಂಕಃ 20/11/2022 ರಂದು ಮೋಟರ್ ಸೈಕಲ್ ನಂಃ ಕೆಎ-56 ಹೆಚ್-8900 ನೇದರ ಮೇಲೆ ನಿಂಬೂರ್ ಗ್ರಾಮಕ್ಕೆ ಹೋಗಿ, ಅಲ್ಲಿ ಖಾಸಗಿ ಚಿಕಿತ್ಸೆ ಪಡೆದುಕೊಂಡು ನಂತರ ಗ್ರಾಮಕ್ಕೆ ಹೋಗುವ ಕುರಿತು ಹುಮನಾಬಾದ ನಿಂಬೂರದಿAದ ನನ್ನ ಮೋಟರ್ ಸೈಕಲ್ ಮೇಲೆ ಮಾಣಿಕ ನಗರ ದಾಟಿ ಕನಕಟ್ಟಾ ಶಿವಾರದ ಬ್ರಿಡ್ಜ ಹತ್ತಿರ ರಾತ್ರಿ ಅಂದಾಜು 23ಃ00 ಗಂಟೆಗೆ ಹೋದಾಗ, ಅಲ್ಲಿ ಎದರುಗಡೆಯಿಂದ ಕನಕಟ್ಟಾ ಕಡೆಯಿಂದ ಕೆಲವರು ಒಂದು ಆಟೊದಲ್ಲಿ ಬಂದು ಮೋಟಾರ ಸೈಕಲ್ ಮುಂದೆ ನಿಲ್ಲಿಸಿ, ಆಟೋದಲ್ಲಿದ್ದ ನಾಲ್ಕು ಜನರು ಮುಖಕ್ಕೆ ಬಟ್ಟೆ ಕಟ್ಟಿಕೊಂಡಿದ್ದು, ನಾಲ್ಕು ಜನರು ಯಾವುದೇ ರೀತಿಯಿಂದ ಮಾತನಾಡದೇ ಕೈಯಿಂದ ನನ್ನ ಹೊಟ್ಟೆ, ಮುಖಕ್ಕೆ ಹೊಡೆದರು, ಅದರಲ್ಲಿ ಒಬ್ಬನು ಚಾಕುವಿನಿಂದ ಬಲಹೊಟ್ಟೆಯ ಕೆಳಭಾಗದಲ್ಲಿ ಹೊಡೆದು ರಕ್ತಗಾಯ ಪಡಿಸಿರುತ್ತಾನೆ. ಇನ್ನೋಬ್ಬ ವ್ಯಕ್ತಿ ಯಾವುದೋ ಒಂದು ಗಟ್ಟಿಯಾದ ವಸ್ತುವಿನಿಂದ ನನ್ನ ಬಲ ಸೊಂಟಕ್ಕೆ ಹೊಡೆದು ಭಾರಿಗುಪ್ತಗಾಯ ಪಡಿಸಿರುತ್ತಾರೆ. ಕೆಳಗೆ ಬಿದ್ದಾಗ ನನ್ನ ಹತ್ತಿರ ಇದ್ದ 1200=00 ರೂಪಾಯಿ ಹಾಗೂ ನನ್ನ ಹತ್ತಿರ ಇದ್ದ ಒಂದು ಮೋಬಾಯಿಲ್ ಫೋನ್ ಕಿತ್ತುಕೊಂಡು ಅವರು ಬಂದ ಆಟೋದಲ್ಲಿ ಓಡಿ ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಭಾಲ್ಕಿ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 153/2022 ಕಲಂ 379 ಐಪಿಸಿ :-

ದಿನಾಂಕ: 21/11/2022 ರಂದು 1100 ಗಂಟೆಗೆ ಫಿರ್ಯಾದಿ ಶ್ರೀ ವಿನೋದ ತಂದೆ ಗೋವಿಂದರಾವ ಧೂಳೆ ವಯ: 53 ವರ್ಷ ಜಾ: ಗುರವ ಉ: ಟೆಂಪೋ ಚಾಲಕ ಸಾ: ಭಾತಾಂಬ್ರಾ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದ್ದರೆ, ಫಿರ್ಯಾದಿಯು ಶ್ರೀ ಬಾಬುರಾವ ತಂದೆ ತುಕಾರಾಮ ಸಾ: ಭಾತಾಂಬ್ರಾ ತಾ: ಭಾಲ್ಕಿ ಜಿ: ಬೀದರ ಇವರ ಬುಲೆರೋ ಟೆಂಪೋ ನಂ ಕೆಎ 39/7941 ನೇದ್ದು ಸುಮಾರು ನಾಲ್ಕು ತಿಂಗಳಿಂದ ಚಲಾಯಿಸಿಕೊಂಡಿದ್ದು ದಿನಾಂಕ: 10/11/2022 ರಂದು ಸದರಿ ಟೆಂಪೋವಿನ ಪೂಜೆ ಮಾಡಿಸಿ ಭಾತಾಂಬ್ರಾ ಲಖನಗಾಂವ ಮೇನ ರೋಡ ಗುರು ಮೇಡಿಕಲ ಮುಂದೆ ನಿಲ್ಲಿಸಿದ್ದು, ದಿನಾಂಕ: 11/11/2022 ರಂದು ಸಹ ನಾನು ಚಲಾಯಿಸುವ ಟೆಂಪು ನಿಲ್ಲಿಸಿದ ಜಾಗೆಯಲ್ಲಿ ಇರುತ್ತದೆ. ಈ ದಿನ ನಾನು ಮತ್ತು ನಮ್ಮ ಮಾಲಿಕರಾದ ಬಾಬುರಾವ ತಂದೆ ತುಕಾರಾಮ ಇಬ್ಬರು ನೋಡಿದಾಗ ರಾತ್ರಿ 10:00 ಗಂಟೆಯ ಸುಮಾರಿಗೆ ಸದರಿ ಬುಲೇರೋ ಟೆಂಪೋವಿನ ಎಲ್ಲಾ ಟೈಯರಗಳು ಇದ್ದವು. ನಂತರ ಮನೆಯ ಕಡೆಗೆ ಮತ್ತು ನಮ್ಮ ಮಾಲಿಕರು ಅವರ ಮನೆಯ ಕಡೆ ಹೋಗಿದ್ದು ಇರುತ್ತದೆ. ಹೀಗಿದ್ದು ದಿನಾಂಕ: 12/11/2022 ರಂದು ಮುಂಜಾನೆ 1000 ಗಂಟೆಯ ಸುಮಾರಿಗೆ ಟೆಂಪೋ ಬಳಿ ಹೋದಾಗ ಸದರಿ ಬುಲೆರೋ ಟೆಂಪೋ ನಂ ಕೆಎ 39/7941 ನೇದ್ದರ ಬಲಗಡೆ ಒಂದು ಟೈಯರ ಇದ್ದಿರುವುದಿಲ್ಲ. ಇನ್ನೊಂದು ಟೈಯರ ಬಿಚ್ಚಿ ಇಟ್ಟಿರುತ್ತಾರೆ. ಇದನ್ನು ಯಾರೋ ಕಳ್ಳರು ರಾತ್ರಿ ಸಮಯದಲ್ಲಿ ಕಳವು ಮಾಡಿದಂತೆ ಕಂಡು ಬಂದಿರುತ್ತದೆ. ಸದರಿಯವರು ಟೈಯರ ಬಿಚ್ಚಲು ತಂದ ಜಾಕ ಸಹಿತ ಅಲ್ಲೆ ಇಟ್ಟಿರುತ್ತಾರೆ ಟೈಯರ ಕಳುವಾಗಿದ್ದು ಇರುತ್ತದೆ. ಸದರಿ ಬುಲೆರೋ ಟೆಂಪುವಿನ ಕಳುವಾದ ಟೈಯರ ಡಿಸ್ಕ ಸಮೇತ ಅ: ಕಿ: 12500/- ರೂ ನೇದ್ದು ಆಗುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.